೪) ಮಂಜೂರಾತಿಯಾಗಿರುವ ನೀರು ಸರಬರಾಜು ಯೋಜನೆಯಲ್ಲಿ ಒಳಗೊಂಡಿರುವ ೨ ಮೇಲ್ಮಟ್ಟದ ಜಲಸಂಗ್ರಹಗಾರಗಳು ಸೇರಿದಂತೆ ಎಲ್ಲಾ ಕಾಮಗಾರಿಗಳನ್ನು ೧೯೮೮ರ ಅಂತ್ಯದ ವೇಳೆಗೆ ಪೂರೈಸುವ ನೀರಿಕ್ಷೆಯಿದೆ.

ಬಳ್ಳಾರಿ ಜಿಲ್ಲೆಯ ಹರಪನ ಹಳ್ಳಿಯಲ್ಲಿ ಒಳಚರಂಡಿ ಅಥವಾ ಹೊರಚರಂಡಿ ವ್ಯವಸ್ಥೆಯ ಬಗ್ಗೆ

೮೬೪. ಶ್ರೀ ಬಿ. ಹೆಚ್. ಯುಂಕಾನಾಯಕ್. (ಹರಪನಹಳ್ಳಿ).— ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹರಪನಹಳ್ಳಿ ಬಳ್ಳಾರಿ ಜಿಲ್ಲೆಯ ಅತಿ ದೊಡ್ಡ ತಾಲ್ಲೂಕು ಕೇಂದ್ರವಾಗಿದ್ದು, ಇದರ ಜನಸಂಖ್ಯೆ ಸುಮಾರು ೪೦,೦೦೦ಕ್ಕೂ ಜಾಸ್ತಿಯಾಗಿದ್ದು ದಿನೇ ದಿನೇ ಜನಸಂಖ್ಯೆ ಏರುತ್ತಿರುವುದು ನಿಜವಲ್ಲವೇ ?

ಆ) ಸದರಿ ತಾಲ್ಲೂಕಿನಲ್ಲಿ ಒಳಚರಂಡಿ ಹಾಗೂ ಹೊರ ಚರಂಡಿ ವ್ಯವಸ್ಥೆ ಇಲ್ಲದೆ ಊರಿನಲ್ಲಿ ಕೊಳಚೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು ಇದರಿಂದ ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯಕ್ಕೆ ಧಕ್ಕೆ ಯುಂಟಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ ಮೇಲೆ ಹೇಳಿರುವ ವ್ಯವಸ್ಥೆಯನ್ನು ಕೂಡಲೇ ಕಾರ್ಯಗತಗೊಳಿಸಲಾಗುವುದೇ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಇದು ದೊಡ್ಡ ತಾಲ್ಲೂಕು ಕೇಂದ್ರಗಳಲ್ಲಿ ಒಂದಾಗಿರುವುದು ನಿಜ. ಪಟ್ಟಣದ ಜನಸಂಖ್ಯೆ ೧೯೮೧ರ ಜನಗಣತಿ ಪ್ರಕಾರ ೨೭,೩೮೬ ಇದ್ದು ಈಗ ಸುಮಾರು ೩೨,೦೦೦ ಇರಬಹುದೆಂದು ಅಂದಾಜು ಇದೆ, ಎಲ್ಲಾ ಪಟ್ಟಣಗಳಂತೆ ಇದರ ಜನಸಂಖ್ಯೆಯೂ ಬೆಳೆದಿದೆ.

ಆ) ಪಟ್ಟಣದಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲ, ಆದರೆ ಹೊರಚರಂಡಿ ಮತ್ತು ಪಟ್ಟಣದ ನೈರ್ಮಲ್ಯವನ್ನು ಪುರಸಭೆಯವರು ನೋಡಿಕೊಳ್ಳುತ್ತಿದ್ದಾರೆ.

ಇ) ಈ ಕೆಳಕಂಡ ಕಾರಣದಿಂದ ಸದ್ಯದಲ್ಲಿ ಈ ಪಟ್ಟಣಕ್ಕೆ ಒಳಚರಂಡಿ ಯೋಜನೆಯನ್ನು ಮಾಡಲು ಸಾಧ್ಯವಾಗುವುದಿಲ್ಲ.

೧) ಪಟ್ಟಣಕ್ಕೆ ಕನಿಷ್ಟ ೨೦ರಿಂದ ೨೫ ಗ್ಯಾಲನ್ ನೀರು ಸರಬರಾಜು ವ್ಯವಸ್ಥೆ ಇರುವುದಿಲ್ಲ.

೨) ಒಳಚರಂಡಿ ವ್ಯವಸ್ಥೆಗೆ ಅಂದಾಜು ಸುಮಾರು ೧ ಕೋಟಿ ರೂ.ಗಿಂತಲೂ ಹೆಚ್ಚು ಖರ್ಚಾಗುವುದು ಇದನ್ನು ಪುರಸಭೆಯವರು ಭರಿಸುವುದು ಕಷ್ಟವಾಗುವುದು.

೩) ಕೇಂದ್ರ ಸರ್ಕಾರದ ಯೋಜನೆಯು ಮೇರೆಗೆ ಇದರ ಜನಸಂಖ್ಯೆ ೧ ಲಕ್ಷಕ್ಕಿಂತ ಕಡಿಮೆ ಇರುವುದರಿಂದ ಕಡಿಮೆ ವೆಚ್ಚದ ಶೌಚಾಲಯಗಳನ್ನು ನಿರ್ಮಿಸಬಹುದಾಗಿದ್ದು ಅದನ್ನು ಪರಿಶೀಲಿಸಲಾಗುವುದು.

ಪುರ ಸಭೆಯಂ ೨೦ ಅಂಗಡಿಗಳ ಪ್ರಕರಣ ಕುರಿತಂ

೯೯೮. ಶ್ರೀ ಗೋಪಾಲ ಮುಂಕುಂದ ಕಾನಡೆ (ಸಿರ್ಸಿ).— ಮಾನ್ಯ ಕಾನೂನು ಸಂಸದೀಯಂ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉತ್ತರಕನ್ನಡ ಜಿಲ್ಲೆಯ ಸಿದ್ದಾಪುರ ಪುರಸಭೆಯ ರಸ್ತೆ ಅಂಚಿನ ಅಂಗಡಿಗಳ ಒಟ್ಟು ಸಂಖ್ಯೆ ಎಷ್ಟು?